ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ನಾನು ಹಾಸನ ಟೌನ್‌ನಲ್ಲಿ ಇದ್ದೆ. ಸನ್ಮಾನ್ಯ ಕರೀಗೌಡರು ನನಗೆ ಹೇಳಿದರೆ ಆ ಜಾಗ ಅವತ್ತೇ ನೋಡುತ್ತಿದ್ದೆ. ನಾನು ಒಂದು ದಿನ ಪೂರ್ತಿ ಅಲ್ಲಿದ್ದೆ. ನಾನು ಆದನ್ನು ನೋಡಿಲ್ಲ. ಅಲ್ಲಿ ಅದಕ್ಕೆ ಹಣ ಖರ್ಚು ಮಾಡಿರುವುದು ಐ.ಯು.ಡಿ.ಪಿ. ಕಾರ್ಯಕ್ರಮದ ಪ್ರಕಾರ ಇದೆ ಎಂದು ಕಾಣುತ್ತದೆ. Land Acquisition, Development and improvement of roads, traffic and transportation, construction of Mandis and markets, Industrial sheds and low cost sanitation ಇತ್ಯಾದಿ ಈ ನಾಲ್ಕೈದು ಐಟಂಗಳಿಗೆ ಐ.ಯು.ಡಿ.ಪಿ ಯಲ್ಲಿ ಹಣ ಖರ್ಚು ಮಾಡಬಹುದೆಂದು ಕೇಂದ್ರ ಸರ್ಕಾರದವರು ಕೊಟ್ಟಿರುವ ಸೂಚನೆ ಪ್ರಕಾರ ಹಣ ಖರ್ಚು ಮಾಡಿದ ಹಾಗೆ ಕಾಣಿಸುತ್ತದೆ. ಆದರೆ ಅಲ್ಲಿ ನಡೆದಿರತಕ್ಕ ಕೆಲಸದ ಗುಣಮಟ್ಟ ಕಡಿಮೆ ಎಂದು ಸನ್ಮಾನ್ಯ ಕರೀಗೌಡರು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಒಂದು ವರದಿ ತರಿಸುತ್ತೇನೆ. ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ.ವಿ. ಕರೀಗೌಡ.—ಅಲ್ಲಿ ಏನಾಗಿದೆಯೆಂದರೆ ೮೦ ಅಂಗಡಿ ಮಳಿಗೆಗಳಿಗೆ ರೋಲಿಂಗ್ ಷಟರ್ಸ್ ಹಾಕಿದ್ದಾರೆ. ಕಾನೂನು ಪ್ರಕಾರ ೧೮ ಗೇಜ್ ಇರಬೇಕು. ಆದರೆ ಅದು ೨೪-೨೫ಕ್ಕೆ ಹೋಗಿದೆಯೋ ಏನೋ ಗೊತ್ತಿಲ್ಲ. ಮುಟ್ಟಿದರೆ ಅಲ್ಲಾಡುತ್ತಿದೆ. ಜೊತೆಗೆ ಕಾಂಪ್ಲೆಕ್ಸ್ ನೋಡುವುದಕ್ಕೆ ಕ್ಯಾಗುವುದಿಲ್ಲ. ಫೌಂಡೇಷನ್ ಕ್ರಾಕ್ ಆಗಿದೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು, ಕಮೀಷನರ್ ಕೌನ್ಸಿಲರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ನಾನು ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಆದನ್ನು ಸಿ.ಓ.ಡಿ.ಗೆ ಏತಕ್ಕೆ ರೆಫರ್ ಮಾಡಬಾರದು ? ಅಥವಾ ನ್ಯಾಯಾಂಗ ತನಿಖೆ ಏತಕ್ಕೆ ಮಾಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಗುಣಮಟ್ಟ ಕಡಿಮೆ ಇದೆ ಎಂದು ಹೇಳಿದ್ದಾರೆ. ವರದಿ ತರಿಸಿಕೊಂಡ ನಂತರ ಮುಂದಿನ ಕ್ರಮ ಜರುಗಿಸುವುದಕ್ಕೆ ಯೋಚನೆ ಮಾಡುತ್ತೇನೆ.

ಶ್ರೀ ಬಿ. ವಿ. ಕರೀಗೌಡ.—ವರದಿ ಕೊಡುತ್ತಾರೆ. ಇಲ್ಲಿ ಕೊಟ್ಟಹಾಗೇ ಸರಿಯಾಗಿದೆ ಎಂದು ಕೊಡುತ್ತಾರೆ. ಸಿ.ಓ.ಡಿ.ಗೆ ರೆಫರ್ ಮಾಡುವುದಕ್ಕೆ ಏನು ತೊಂದರೆಯಿದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಿ.ಓ.ಡಿ.ಗೆ ಕೊಡಬೇಕು ಎಂದೂ ಹೇಳುತ್ತಿಲ್ಲ. ಕೊಡಬಾರದು ಎಂದೂ ಹೇಳುತ್ತಿಲ್ಲ ಪೂರ್ವಭಾವಿಯಾಗಿ ಮುನಿಸಿಪಾಲಿಟಿಯಿಂದ ವರದಿ ತರಿಸಿಕೊಂಡನಂತರ ಲೋಪ ಕಂಡುಬಂದರೆ, ತನಿಖೆ ಆವಶ್ಯಕತೆ ಇದೆ ಎಂದು ಕಂಡುಬಂದರೆ ಮುಂದಿನ ಕ್ರಮ ಜರುಗಿಸುತ್ತೇನೆ ಎಂದೂ ಹೇಳಿದ್ದೇನೆ. ಮಾನ್ಯ ಸದಸ್ಯರು ಈ ಬಗ್ಗೆ ಸಂಶಯ ಪಡಬೇಕಾಗಿಲ್ಲ.

ಶ್ರೀ ಬಿ. ವಿ. ಕರೀಗೌಡ.—ಒಂದು ಡ್ರೈನೇಜ್ ಕೂಡ ಅಲ್ಲಿಲ್ಲ.

ಅಧ್ಯಕ್ಷರು.—ಕರೀಗೌಡರೆ, ಮಂತ್ರಿಗಳ ಪಕ್ಕದಲ್ಲಿ ಕೂತು ಡಿಸ್‌ಕಸ್ ಮಾಡಿ. ಪ್ರತಾಪಚಂದ್ರ ಶೆಟ್ಟಿಯವರೆ, ತಮ್ಮ ಪ್ರಶ್ನೆಯನ್ನು ೧೨-೯-೮೫ಕ್ಕೆ ಹಾಕಿದ್ದೇನೆ,

ಮದ್ದೂರು ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಬವಣೆ ಬಗ್ಗೆ

೧೨೦೪. ಶ್ರೀ ಬಿ. ಅಪ್ಪಾಜಿಗೌಡ (ಮದ್ದೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಮದ್ದೂರು ಪಟ್ಟಣವಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಶಾಶ್ವತ ಪರಿಹಾರಕ್ಕಾಗಿ ಕ್ರಮಕೈಗೊಂಡಿದ್ದಾರೆಯೇ?

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಬಂದಿದೆ

ಆ) ಹೌದು

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಅಪ್ಪಾಜಿಗೌಡ.—ಮದ್ದೂರು ಪಟ್ಟಣದಲ್ಲಿ ಸುಮಾರು ೨೦ ಸಾವಿರ ಪ್ರಜಾಸಂಖ್ಯೆ ಇದೆ. ಆಲ್ಲಿ ನೀರಿನ ಅಭಾವ ತುಂಬಾ ಇದೆ. ಈಗ ಶಿಂಷಾ ನದಿಯಿಂದ ನೇರವಾಗಿ ಪೈಪುಗಳ ಮೂಲಕ ನೀರನ್ನು ಕೊಡುತ್ತಿದ್ದಾರೆ. ಅನೇಕ ವೇಳೆ ನೀರಿನಲ್ಲಿ ಕಪ್ಪೆಚಿಪ್ಪಿ, ಮರಳು, ಕೆಲವು ವೇಳೆ ಹಾವಿನ ಮರಿಗಳೂ ಬಂದಿದ್ದುಂಟು. ಇಂಥ ಅಶುದ್ಧವಾದ ನೀರನ್ನು ಕುಡಿದು ಜನ ಕರುಳುಬೇನೆಯಿಂದ ನರಳುತ್ತಿದ್ದಾರೆ. ಮೆತ್ತಿ ಪಡಬಾರದ ಕಷ್ಟ ಪಟ್ಟು ಆಸ್ವತ್ರೆಗೆ ಸೇರುತ್ತಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಇದೆಯೇ? ಯಾವಾಗ ಇದನ್ನು ಮಾಡುತ್ತೀರಿ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಹೇಳಿದಂತೆ ಶಿಂಷಾ ನದಿಯ ಮೂಲದಿಂದ ನೀರನ್ನು ಒದಗಿಸಿಕೊಡತಕ್ಕ ಕೆಲಸ ನಡೆದು ನೀರು ಸರಬರಾಜಾಗುತ್ತಿದೆ. ನೀರು ದೋಷಪೂರ್ಣವಾಗಿದೆಯೆಂದು ಹೇಳಿದ್ದಾರೆ. ನಾನು ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ದೋಷ ಇದ್ದರೆ ಸರಿಪಡಿಸತಕ್ಕ ಕ್ರಮವನ್ನು ತಕ್ಷಣ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಅಪ್ಪಾಜಿಗೌಡ.—ಇದರ ಬಗ್ಗೆ ಈಗ ಏನಾದರೂ ಕ್ರಮ ತಗೆದುಕೊಂಡಿದ್ದೀರಾ? ಅಥವಾ ತೆಗೆದುಕೊಳ್ಳುತ್ತೀರಾ? ಪರಿಶೀಲನೆ ಮಾಡುತ್ತೇವೆ ಎಂದರೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಿನ್ನೆ ಮೊನ್ನೆ ಸನ್ಮಾನ್ಯ ಸದಸ್ಯರು ಹೇಳಿದ್ದರೆ ನೋಡುತ್ತಿದ್ದೆ. ವರದಿ ತರಿಸುತ್ತಿದ್ದೆ. ಬಹುಶಃ ಆ ರೀತಿ ಇರಲಾರದು ಎಂದು ನನ್ನ ನಂಬಿಕೆ. ಸನ್ಮಾನ್ಯ ಸದಸ್ಯರು ಇದೆ ಎಂದು ಹೇಳಿದ್ದಾರೆ. ವರದಿ ತಕ್ಷಣ ತರಿಸಿ ಆ ರೀತಿ ಇದ್ದರೆ ಸರಿಪಡಿಸತಕ್ಕ ಕೆಲಸವನ್ನು ಮಾಡಲು ಆದೇಶ ಕೊಡುತ್ತೇನೆ.

ಪೌರಸೌಲಭ್ಯಗಳನ್ನೊಳಗೊಂಡ ನಿವೇಶನಗಳ ಬಗ್ಗೆ

೧೨೩೧. ಶ್ರೀ ಮಹಮ್ಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ನಗರಾಭಿವೃದ್ಧಿ ವಿಶ್ವಸ್ಥ ಮಂಡಲ ಕೆಲವು ಬಡಾವಣೆಗಳಲ್ಲಿ ಪೌರಸೌಲಭ್ಯ ನಿವೇಶನಗಳನ್ನಾಗಿ ಕಾದಿರಿಸಿರುವ ನಿವೇಶನಗಳ ಸಂಖ್ಯೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ ಮೂರು ವರ್ಷಗಳಲ್ಲಿ ಕಾದಿರಿಸಿರುವ ಪೌರಸೌಲಭ್ಯ ನಿವೇಶನಗಳ ಸಂಖ್ಯೆ ಎಷ್ಟು?

ಆ) ಹಾಗೆ ಕಾದಿರಿಸಿರುವ ಪೌರಸೌಲಭ್ಯ ನಿವೇಶನಗಳನ್ನು ವಸತಿ ನಿವೇಶನಗಳಾಗಿ ಪರಿವರ್ತಿಸಿರುವ ಸಂಖ್ಯೆ ಎಷ್ಟು ?

ಇ) ಈ ನಿವೇಶನಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗಿದೆ.

ಈ) ಹಾಗೆ ಪರಿವರ್ತನೆಯಾದ ಪೌರಸೌಲಭ್ಯ ನಿವೇಶನಗಳಲ್ಲಿ ಹಂಚಿಕೆಯಾಗಿರುವವರ ಹೆಸರನ್ನು ತಿಳಿಸುವುದು?

ಶ್ರೀ ಎ. ಲಕ್ಷ್ಮೀಸಾಗರ್.—(ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳಸಚಿವರು).—

ಅ) ನಗರಾಭಿವೃದ್ಧಿ ವಿಶ್ವಸ್ಥ ಮಂಡಲ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಲವಾರು ಬಡಾವಣೆಗಳಲ್ಲಿ ಕಾದಿರಿಸಿರುವ ಪೌರಸೌಲಭ್ಯ ನಿವೇಶನಗಳ ಸಂಖ್ಯೆ ಳಿಟಿ ಮತ್ತು ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹಂಚಿರುವ ಪೌರಸೌಲಭ್ಯ ನಿವೇಶನಗಳ ಸಂಖ್ಯೆ ೯೯.

ಆ) ಐದು-ಪೌರಸೌಲಭ್ಯ ನಿವೇಶನಗಳನ್ನು ವಸತಿ ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ.

ಇ) ಪೌರಸೌಲಭ್ಯ ನಿವೇಶನಗಳನ್ನು ಹಂಚುವ ಅಧಿಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಇದೆ. ಪೌರಸೌಲಭ್ಯ ನಿವೇಶನಗಳನ್ನು ಕೋರಿ ಬರುವ ಅರ್ಜಿಗಳನ್ನು ಪರಿಶೀಲಿಸಿ ಪ್ರಾಧಿಕಾರದ ಸಭೆಯು ಮುಂದೆ ತಂದು ಪರಿಂಜೂರಾದ ಮೇಲೆ ಇವುಗಳನ್ನು ಹಂಚಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಪಟ್ಟಿಯನ್ನು ಲಗತ್ತಿಸಿದೆ.